ಇ) ಗುತ್ತಿಗೆದಾರರಿಗೆ ಕಾಮಗಾರಿಯ ಹಣ ಸಂದಾಯವಾಗದ ಕಾರಣ ಕಾಮಗಾರಿಯನ್ನು ಟೆಂಡರಿನಲ್ಲಿ ನಿಗದಿಪಡಿಸಿದ ಅವಧಿಯಲ್ಲಿ ಮುಗಿಸಿರುವುದಿಲ್ಲ.

ಈ) ಅನುದಾನದ ಲಭ್ಯತೆ ಮೇಲೆ ಪೂರ್ಣಗೊಳಿಸಲಾಗುವುದು.

603(785) : ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳ ದುರಸ್ತಿಗಾಗಿ ಪ್ರತಿ ಕಿಲೋ ಮೀಟರ್‌ಗೆ ಎಷ್ಟು ಹಣ ಒದಗಿಸಲಾಗಿದೆ;

ಆ) ಮುಂಡರಗಿ ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳೆಷ್ಟು; (ಕಿಲೋ ಮೀಟರ್ ವಿವರ ನೀಡುವುದು);

ಇ) ಸದರಿ ರಸ್ತೆಗಳು ಹಾಳಾಗಿದ್ದು, ಅವುಗಳನ್ನು ದುರಸ್ತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳದಿರಲು ಕಾರಣಗಳೇನು;

ಈ) ಕೂಡಲೇ ಗುಂಡಿಗಳನ್ನು ಮುಚ್ಚಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆಗೆ ಹಾಗೂ ಲೋಕೋಪಯೋಗಿ ಇಲಾಖೆಯಲ್ಲಿ ಬಾಕಿ ಉಳಿದ ರಾಜ್ಯ ಹೆದ್ದಾರಿಗಳ ನಿರ್ವಹಣೆಗೆ ಪ್ರತಿ ಕಿಮೀ ರೂ. 10,000ದಂತೆ ದುರಸ್ತಿಗಾಗಿ 2003–04ನೇ ಸಾಲಿಗೆ ಅನುದಾನ ಬಿಡುಗಡೆ ಮಾಡಲಾಗಿದೆ.

ಆ) ಮುಂಡರಗಿ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳ ವಿವರ ಈ ಕೆಳಗಿನಂತೆ ಇದೆ.

	ಸಂಖ್ಯೆ	ಉದ್ದ
ರಾಜ್ಯ ಹೆದ್ದಾರಿ	2	72.69 ಕಿಮೀ
ಜಿಲ್ಲಾ ಮುಖ್ಯ ರಸ್ತೆ	7	116.31 ಕಿಮೀ
ಒಟ್ಟು	**9**	**189.00 ಕಿಮೀ**

ಇ,ಈ) ಗುಂಡಿಗಳನ್ನು ಮುಚ್ಚುವ ಕಾರ್ಯಕ್ರಮವನ್ನು ಕೈಗೆತ್ತಿಕೊಂಡಿದ್ದು ಇದಕ್ಕೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿರುತ್ತದೆ ಹಾಗೂ ಈ ಕಾರ್ಯಕ್ರಮವನ್ನು ಸಧ್ಯದಲ್ಲಿ ಪೂರ್ಣಗೊಳಿಸಿ ಸುಸ್ಥಿತಿಯಲ್ಲಿ ಇಡಲಾಗುವುದು.

604(786) : ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗದಗ ಜಿಲ್ಲೆ ಮುಂಡರಗಿ ತಾಲ್ಲೂಕಿನ ಕೊರ್ಲಹಳ್ಳಿ ಬಳಿ ಸೇತುವೆ ನಿರ್ಮಾಣ ಮಾಡುವುದರಿಂದ ಗದಗ–ಮುಂಡರಗಿ–ಹಡಗಲಿ ಮಾರ್ಗವಾಗಿ ಬೆಂಗಳೂರಿಗೆ ಹೋಗಲು ಎಷ್ಟು ಕಿಲೋಮೀಟರ್ ಉಳಿತಾಯವಾಗಿದೆ;

ಆ) ಸದರಿ ಸೇತುವೆ ಆದ ನಂತರ ವಾಹನಗಳ ಸಂಚಾರ ಹೆಚ್ಚಾಗಿರುವುದು ನಿಜವೇ;

ಇ) ಗದಗ ತಾಲ್ಲೂಕು ಅಡವಿ ಸೋಮಾಪುರದಿಂದ ಮುಂಡರಗಿ ತಾಲ್ಲೂಕು ಹಮ್ಮಿಗೆ–ವಿಠಲಾಪುರವರೆಗಿನ ಹೆದ್ದಾರಿ ಸಂಖ್ಯೆ 63ರ ರಸ್ತೆಯನ್ನು ಸುಧಾರಿಸಲು ಸಿ.ಆರ್.ಎಫ್. ಅಡಿಯಲ್ಲಿ ತರಲಾಗುವುದೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ತುಂಗಭದ್ರಾ ಸೇತುವೆ ನಿರ್ಮಾಣದ ಮೊದಲು ಗದಗದಿಂದ ಮುಂಡರಗಿ ಹಡಗಲಿ ಮುಖಾಂತರ ಬೆಂಗಳೂರಿಗೆ ಹೋಗಲು 428 ಕಿಮೀ ಆಗುತ್ತಿದ್ದು, ಸೇತುವೆ ನಿರ್ಮಾಣದ ನಂತರ ಈ ದೂರವು 377 ಕಿಮೀ ಆಗಿರುತ್ತದೆ. ಇದರಿಂದ 51 ಕಿಮೀ ಉಳಿತಾಯವಾಗಿರುತ್ತದೆ.

ಆ) ಸದರಿ ಸೇತುವೆ ಆದ ನಂತರ ವಾಹನಗಳ ಸಂಚಾರವು ಹೆಚ್ಚಿಗೆ ಆಗಿರುವುದು ನಿಜ.

ಇ) ಈ ರಸ್ತೆಯನ್ನು ಕೇಂದ್ರ ರಸ್ತೆ ನಿಧಿಯಡಿ ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

605(467) : ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಯಾವ ಯಾವ ನದಿಗಳಿಗೆ ಸೇತುವೆ ನಿರ್ಮಾಣ ಮಾಡುವ ಕ್ರಿಯಾ ಯೋಜನೆಯನ್ನು ಸರ್ಕಾರ ಸಿದ್ಧಪಡಿಸಿದೆ;

ಆ) 2004–05ನೇ ಸಾಲಿನಲ್ಲಿ ಯಾವ ಯಾವ ಯೋಜನೆಯಲ್ಲಿ ಎಷ್ಟು ಸೇತುವೆಗಳನ್ನು ನಿರ್ಮಿಸಿಕೊಡುವ ಸರ್ಕಾರದ ಮುಂದಿದೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಸೇತುವೆಗಳ ನಿರ್ಮಾಣಕ್ಕೆ ಪ್ರಸ್ತುತ ಯಾವುದೇ ಕ್ರಿಯಾ ಯೋಜನೆಯನ್ನು ರೂಪಿಸಲಾಗಿರುವುದಿಲ್ಲ.

ಆ) ಸಧ್ಯದಲ್ಲಿ ನಬಾರ್ಡ್ ಯೋಜನೆಯಡಿ 2003–04ನೇ ಸಾಲಿನಲ್ಲಿ ಗುರುತಿಸಲಾಗಿದ್ದ ವೇಣೂರು ಪೆರ್ಮುಡ ರಸ್ತೆಯಲ್ಲಿನ ಪೆರ್ಮುಡ ಹತ್ತಿರ ಸೇತುವೆ ನಿರ್ಮಾಣ ಕಾಮಗಾರಿಯ ಅಂದಾಜನ್ನು ರೂ. 70.00 ಲಕ್ಷಗಳಿಗೆ ನಬಾರ್ಡನ ಅನುಮೋದನೆಗೆ ಕಳುಹಿಸಿದ್ದು, ಅನುಮೋದನೆ ನಿರೀಕ್ಷಿಸಲಾಗಿದೆ. ನಬಾರ್ಡನಿಂದ ಅನುಮೋದನೆ ದೊರೆತನಂತರ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

606(471) : ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕಿನ ಯಾವ ಯಾವ ರಸ್ತೆಗಳಿಗೆ ಡಾಂಬರೀಕರಣ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆಗಳು ಬಂದಿವೆ;

ಆ) ಇಲಾಖಾ ವತಿಯಿಂದ 2004–05ನೇ ಸಾಲಿಗೆ ಎಷ್ಟು ಕಿ.ಮೀ. ರಸ್ತೆಗಳನ್ನು ಡಾಂಬರೀಕರಣಗೊಳಿಸಲು ಯೋಜಿಸಲಾಗಿದೆ? (ವಿವರ ನೀಡುವುದು)